# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
## ಕೇಂದ್ರ ಕಛೇರಿ : ಸಂಚಾರ ಇಲಾಖೆ : ಬೆಂಗಳೂರು

**ಸಂ.ಕರಾಸಾ/ಕೇಕ/ಸಂ/ಸಾ/ಎಫ್‌–24/ 2116 /17–18** **ದಿನಾಂಕ: 01/07/2017.**

## ಸುತ್ತೋಲೆ: 1391/2017–18

**ವಿಷಯ:** ಕರಾರಸಾ ನಿಗಮದಿಂದ ಆಚರಣೆ ಮಾಡುತ್ತಿರುವ ಹವಾನಿಯಂತ್ರಿತ ಸಾರಿಗೆಗಳ ಆದಾಯದ ಮೇಲೆ ದಿನಾಂಕ 01–07–2017 ರಿಂದ ಏಕರೂಪ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸುವ ಬಗ್ಗೆ.

**ಉಲ್ಲೇಖ:** ಭಾರತ ಸರ್ಕಾರದ ಏಕರೂಪ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ನಿರ್ದೇಶನಗಳು.

*********

ಕೇಂದ್ರ ಸರ್ಕಾರವು ದಿನಾಂಕ 01–07–2017 ರಿಂದ ಜಾರಿಗೆ ಬರುವಂತೆ ಏಕರೂಪ ಸರಕು ಮತ್ತು ಸೇವಾ ತೆರಿಗೆ (GST) ಪದ್ಧತಿಯನ್ನು ಜಾರಿಗೆ ತರುತ್ತಿದೆ. ಈ ತೆರಿಗೆ ಪದ್ಧತಿಯನ್ವಯ ನಿಗಮದಿಂದ ಆಚರಣೆ ಮಾಡಲಾಗುತ್ತಿರುವ ಹವಾನಿಯಂತ್ರಿತ (Air Conditioned Services) ಸಾರಿಗೆಗಳ ಪ್ರಯಾಣ ದರದ ಮೇಲೆ **ಶೇ 5** ರಷ್ಟು ತೆರಿಗೆ(GST)ಯನ್ನು ದಿನಾಂಕ: **01/07/2017**ರಿಂದ ಜಾರಿಗೆ ಬರುವಂತೆ ಪಾವತಿಸಲು ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ನಿಗಮವು ಪಡೆದುಕೊಂಡಿರುವ GST Provisional ID: 29AAACV6497R2Z4 ಆಗಿರುತ್ತದೆ.

ಮೇಲಿನಂತೆ ಜಿಎಸ್‌ಟಿ ದರಗಳನ್ನು ದಿನಾಂಕ 01–07–2017 ರಿಂದ ಜಾರಿಗೆ ಬರುವಂತೆ ವಿಧಿಸಬೇಕಿರುತ್ತದೆ. ಈ ದರಗಳನ್ನು ವಿಧಿಸುವಲ್ಲಿ ಕೆಳಕಂಡ ನಿಯಮಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ಕರಾರಸಾ, ವಾಕರಸಾ ಮತ್ತು ಈಕರಸಾ ಸಂಸ್ಥೆಗಳಿಂದ ಆಚರಣೆ ಮಾಡುತ್ತಿರುವ ಹವಾನಿಯಂತ್ರಿತ (Air Conditioned Services) ಸಾರಿಗೆಗಳ **ಒಟ್ಟು ಪ್ರಯಾಣ ದರದ** ಮೇಲೆ **ಶೇ 5** ರಷ್ಟು ತೆರಿಗೆಯನ್ನು ದಿನಾಂಕ: **01/07/2017**ರಿಂದ ಜಾರಿಗೆ ಬರುವಂತೆ ಪ್ರಯಾಣಿಕರಿಂದ ಪಡೆದುಕೊಳ್ಳುವುದು.
2. ತೆರಿಗೆಯನ್ನು ಲೆಕ್ಕಾಚಾರ ಮಾಡಿ ಮುಂದಿನ ರೂ. ಗಳಿಗೆ ರೌಂಡಿಂಗ್ ಅಫ್ ಮಾಡುವುದು ಹಾಗೂ ಸದರಿ GST ಶುಲ್ಕವನ್ನು ಟಿಕೇಟ್‌ಗಳಲ್ಲಿ ಪ್ರತ್ಯೇಕವಾಗಿ ಮುದ್ರಿತವಾಗುವಂತೆ ಕ್ರಮ ವಹಿಸುವುದು.
3. ಪ್ರಯಾಣ ದರದ ಮೇಲಿನ ಸರಕು ಮತ್ತು ಸೇವಾ ತೆರಿಗೆ ಮೊತ್ತವನ್ನು ಲೆಕ್ಕಪತ್ರ ಇಲಾಖೆಯಿಂದ ನೀಡುವ ಪ್ರತ್ಯೇಕ ಲೆಕ್ಕ ಪತ್ರ ಶೀರ್ಷಿಕೆಯಡಿಯಲ್ಲಿ ಇಡಲು ಕ್ರಮ ಕೈಗೊಳ್ಳುವುದು.
4. ಸರಕು ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದಂತೆ ಅವತಾರ್ ಮತ್ತು ಇಟಿಎಂ ತಂತ್ರಾಂಶದಲ್ಲಿ ಸೂಕ್ತ ಬದಲಾವಣೆಗಳನ್ನು ಗಣಕ ಇಲಾಖೆಯಿಂದ ಮಾಡಲು ಹಾಗೂ ದಿನಾಂಕ: **01/07/2017**ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ನೂತನ GST ದರಗಳನ್ನು ಯಾವುದೇ ವಿಳಂಬಕ್ಕೆ ಅವಕಾಶ ನೀಡದಂತೆ ಜಾರಿಮಾಡಲು ಸಂಬಂಧಪಟ್ಟ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಕ್ರಮ ಕೈಗೊಳ್ಳುವುದು.

ಸುತ್ತೋಲೆ ಸ್ವೀಕರಿಸಿದಕ್ಕೆ ಸ್ವೀಕೃತಿ ಮತ್ತು ಅನುಸರಣಾ ವರದಿ ನೀಡುವುದು.

**ಪ್ರಧಾನ ವ್ಯವಸ್ಥಾಪಕರು(ಸಂಚಾರ)**

**ಪ್ರತಿಯನ್ನು :**

ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂ.ಮ.ನ.ಸಾ.ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ವಿಭಾಗಗಳಿಗೆ ಈ ಬಗ್ಗೆ ಹೆಚ್ಚಿನ ಸೂಕ್ತ ಮಾರ್ಗದರ್ಶನ ನೀಡಲು ಕೋರಿದೆ.

ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ